**ದಿನಾಂಕಃ 07.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು PUC ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ನನ್ನ ಸ್ವತ್ತು ಇರುತ್ತದೆ ಎಂದರೆ ಸರಿ. ಖಾತಾ ನಂ 367 ರಲ್ಲಿ ವಾದಿಯು ಮನೆಯನ್ನು ಕಟ್ಟಿಕೊಂಡಿರುತ್ತಾರೆಂದರೆ ಸರಿ. ಅದರ ಒಟ್ಟು ವಿಸ್ತೀರ್ಣ 40 X 40 ಅಡಿ ಇರುತ್ತದೆಂದರೆ ಸರಿಯಲ್ಲ. ವಾದಿಯು ಅವರ ಸ್ವತ್ತನ್ನು ಅಳತೆ ಮಾಡಿಸಿರುತ್ತಾರೆಂದು ಗೊತ್ತಿರುವುದಿಲ್ಲ. ವಾದಿಯು ಸ್ವತ್ತು 40 X 40 ಅಡಿ ಇರುತ್ತದೆ ಅದಕ್ಕೆ ಸಂಬಂಧಿಸಿದಂತೆ ಪಂಚಾಯಿತಿಯಲ್ಲಿ ಖಾತೆಯನ್ನು ಸಹ ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ವಾದಿಯು ಅವರ ಪೂರ್ವಜರಿಂದ ಬಂದಂತಹ ಸ್ವತ್ತನ್ನು ವಿಭಾಗ ಮಾಡಿಕೊಂಡು ಅದರ ಸ್ವಾ ಧೀನದಲ್ಲಿರುತ್ತಾರೆಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಮುನಿಆಂಜಿನಪ್ಪನವರ ಮನೆ ಮತ್ತು ರಸ್ತೆ ಇರುತ್ತದೆಂದರೆ ಸರಿ. ಅದರ ಪಶ್ಚಿಮಕ್ಕೆ ನನ್ನ ತಾತನ ಸ್ವತ್ತು ಇರುತ್ತದೆಂದರೆ ಸರಿ. ಉತ್ತರಕ್ಕೆ ಪಂಚಾಯತಿ ರಸ್ತೆ ಇರುತ್ತದೆಂದರೆ ಸರಿ. ದಕ್ಷಿಣಕ್ಕೆ ಗಿಡ್ಡಪ್ಪರವರ ಸ್ವತ್ತು ಇರುತ್ತದೆಂದರೆ ನಾರಾಯಣಪ್ಪ ಹಾಗೂ ಅವರ ಮಕ್ಕಳ ಚನ್ನೇಗೌಡರವರ ಸ್ವತ್ತು ಇರುತ್ತದೆ. ಸದರಿ ಚೆಕ್ಕುಂಬಧಿಯಲ್ಲಿರುವ ಸ್ವತ್ತು ವಾದಿಯ ಸ್ವತ್ತಾಗಿರುತ್ತದೆಂದರೆ ಸರಿ.

ಪಶ್ಚಿಮದಲ್ಲಿರುವ ನಮ್ಮ ಸ್ವತ್ತು 36 X 33 ಅಡಿ ಇರುತ್ತದೆ. ನನ್ನ ಹಾಗೂ ಪ್ರತಿವಾದಿಯು ಜಾಗದ ಮಧ್ಯೆ 3 ಅಡಿಯ ಸಂದು ಇರುತ್ತದೆಂದರೆ ಸಾಕ್ಷಿಯು ಆ 3 ಅಡಿ ಸಂದು ನಮ್ಮದೇ ಜಾಗ ಎಂದು ಉತ್ತರಿಸಿರುತ್ತಾರೆ. 3 ಅಡಿ ಸಂದು ಇರುತ್ತದೆ. ಆ ಜಾಗವನ್ನು ಓಡಾಡಲು ಬಿಟ್ಟಿರಲಾಗಿರುತ್ತದೆ ಎಂದರೆ ನಾನೇ ಮನೆ ಕಟ್ಟುವಾಗ ಗಾಳಿ ಬೆಳಕು ಬರುವ ಉದ್ದೇಶದಿಂದ ಸದರಿ ಜಾಗವನ್ನು ಬಿಟ್ಟು ಮನೆ ಕಟ್ಟಿರುತ್ತೇನೆ.

ಮೊದಲು ಪ್ರತಿವಾದಿಯು ಮನೆಯನ್ನು ಕಟ್ಟಿರುತ್ತಾರೆ. ಆದರೆ, ಮನೆ ಕಟ್ಟುವಾಗ ಅವರಿಗೆ ಪಾಯ ಹಾಕಲು ಜಾಗದ ಕೊರತೆ ಇದ್ದ ಕಾರಣ ನನ್ನ ಜಾಗದಿಂದ 1 ಅಡಿ ಜಾಗವನ್ನು ಅವರಿಗೆ ಬಿಟ್ಟುಕೊಟ್ಟಿರುತ್ತೇನೆ. ಜಾಗವನ್ನು ಬಿಟ್ಟುಕೊಟ್ಟಿರುವುದಕ್ಕೆ ಯಾವುದೇ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ, ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಿರಿಯರ ಸಮಕ್ಷಮ ಯಾವುದೇ ರಾಜಿ ಪಂಚಾಯತಿ ಸಹ ಆಗಿರುವುದಿಲ್ಲ. ಆ ರೀತಿ 1 ಅಡಿ ಜಾಗವನ್ನು ಅವರಿಗೆ ಬಿಟ್ಟು ಕೊಟ್ಟಿರುವುದಕ್ಕೆ ಪಂಚಾಯತಿಯಲ್ಲಿಯೂ ಸಹ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.

ಪ್ರತಿವಾದಿಯ ಪಶ್ಚಿಮಕ್ಕೆ ಇರುವ ನನ್ನ ಸ್ವತ್ತಿನಲ್ಲಿ ಮೊದಲು ದನದ ಕೊಟ್ಟಿಗೆಯನ್ನು ಮಾಡಿಕೊಂಡಿರುತ್ತೇನೆಂದರೆ ಸರಿ. ಕೊಟ್ಟಿಗೆಯನ್ನು ತೆಗೆದು ಮನೆ ಕಟ್ಟಲು ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದಿರುತ್ತೇನೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದನದ ಕೊಟ್ಟಿಗೆ ಉತ್ತರ ದಕ್ಷಿಣ 36 ಅಡಿ ಹಾಗೂ ಪೂರ್ವ ಪಶ್ಚಿಮ 33 ಅಡಿ ವಿಸ್ತೀರ್ಣದಲ್ಲಿತ್ತು.

ನಾನು ಹಾಜರುಪಡಿಸಿರುವ ಪಂಚಾಯತಿಯ ತೆರಿಗೆ ಡಿಮ್ಯಾಂಡ್ ರೆಜಿಸ್ಟಾರ್ ಗಳಲ್ಲಿ ವಿಸ್ತೀರ್ಣವನ್ನು ನಮೂದಿಸಿರುವುದಿಲ್ಲ ಆದರೆ ಮೊದಲು ನಮ್ಮ ಮನೆಯಲ್ಲಿ ಆದಂತಹ ಪಾಲು ಪಟ್ಟಿಯಲ್ಲಿ ಅದರ ವಿಸ್ತೀರ್ಣವನ್ನು ತೋರಿಸಲಾಗಿರುತ್ತದೆ. ವಿಭಾಗ ಪತ್ರದಲ್ಲಿ ಗಜಗಳಲ್ಲಿ ಅಳತೆಯನ್ನು ತೋರಿಸಲಾಗಿರುತ್ತದೆ. ನಮ್ಮ ವಿಭಾಗ ಪತ್ರದಲ್ಲಿ ಅಳತೆಯನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರವನ್ನು ಹೊರತು ಪಡಿಸಿ ಬೇರೆ ಯಾವುದೇ

ದಾಖಲೆಗಳಿರುವುದಿಲ್ಲ ಎಂದರೆ ಸರಿಯಲ್ಲ. 3 ಅಡಿ ಸಂದಿನ ಜಾಗದಲ್ಲಿ ಓಡಾಡಲು ವಾದಿಗೆ ನಾನೇ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಜಾಗವನ್ನು ಅತಿಕ್ರಮಣ ಮಾಡಿ ಅದಕ್ಕೆ ಸಜ್ಜಾವನ್ನು ಕಟ್ಟಲು ಪ್ರಾರಂಭಿಸಿರುತ್ತೇನೆಂದರೆ ಸರಿಯಲ್ಲ. ನಾನು ಸಜ್ಜಾ ಕಟ್ಟುತ್ತಿರುತ್ತೇನೆಂದು ವಾದಿಯು ಪಂಚಾಯತಿಗೆ ತಕರಾರು ಅರ್ಜಿಯನ್ನು ಸಹ ಸಲ್ಲಿಸಿರುತ್ತಾರೆಂದರೆ ಸರಿ. ತಕರಾರು ಅರ್ಜಿಯನ್ನು ಪಡೆದ ನಂತರ ಕಂದಾಯ ಇಲಾಖಾಧಿಕಾರಗಳು ಸ್ಥಳಕ್ಕೆ ಬಂದು ಅಳತೆ ಮತ್ತು ಪಂಚನಾಮೆಯನ್ನು ಮಾಡಿರುತ್ತಾರೆಂದರೆ ಸರಿ. ಅಳತೆ ಸಮಯದಲ್ಲಿ ಪ್ರತಿವಾದಿಯ ಮನೆಗೆ ಗಾಳಿ ಬೆಳಕು ವಿಷಯಕ್ಕೆ ತೊಂದರೆ ಕೊಡಬೇಡಿ ಎಂದು ಹೇಳಿ ಹೋಗಿರುತ್ತಾರೆಂದರೆ ಸರಿ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ಜಾಗವನ್ನು ಅತಿಕ್ರಮಣ ಮಾಡಿಕೊಂಡು ಮನೆ ಕಟ್ಟುತ್ತಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**